ಅಸಲು ದಾವಾ ಸಂಖ್ಯೆ66/2020

ಪ್ರಾಸಾ–1

**ದಿನಾಂಕ 09.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀಮತಿ ಬಿ.ಎಸ್.ಆರ್. 2 ನೇ ಪ್ರತಿವಾದಿಯ ಪರ ವಕೀಲರಿಂದಃ–**

ನಿಪಿ.44 ಮತ್ತು 45 ರ ವಿಭಾಗ ಪತ್ರಗಳು ನನ್ನ ತಂದೆ, ಅವರ ಸಹೋದರರು ಮತ್ತು ತಾಯಿಯ ನಡುವೆ ಆಗಿದ್ದ ವಿಭಾಗ ಪತ್ರಗಳು ಎಂದರೆ ಸರಿ. ಆ ವಿಭಾಗ ಪತ್ರಗಳ ವಿಷಯಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ, ಅವುಗಳ ಬಗ್ಗೆ ಸ್ವಲ್ಪ ಗೊತ್ತಿದೆ. ನಿಪಿ.44 ರ ವಿಭಾಗ ಪತ್ರದಲ್ಲಿ ನನ್ನ ತಂದೆಗೆ ನೀಡಲಾಗಿದ್ದ ಆಸ್ತಿಗಳನ್ನು ಕಡಿಮೆ ಮಾಡಿ ನಿಪಿ.45 ರ ವಿಭಾಗ ಪತ್ರದಲ್ಲಿ ನಮೂದಿಸಲಾಯಿತು ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ತಂದೆಗೆ ಸರ್ವೆ ನಂಬರ್ 49/4 ಮತ್ತು 88/ಪಿ ರ ಆಸ್ತಿಗಳನ್ನು ನಿಪಿ.45 ರ ವಿಭಾಗ ಪತ್ರದಲ್ಲಿ ನೀಡಲಾಯಿತು ಎಂದರೆ ಆ ವಿಭಾಗ ಪತ್ರವನ್ನು ನನ್ನ ತಂದೆ ಮತ್ತು ಅವರ ಇಬ್ಬರ ಸಹೋದರರು ಸೇರಿ ಮಾಡಿಕೊಂಡಿರುತ್ತಾರೆ. ನಿಪಿ.45 ರ ವಿಭಾಗ ಪತ್ರದ ಪ್ರಕಾರ ಆಗಿರುವ ಕಂದಾಯ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಪಹಣಿ ಮತ್ತು ಮ್ಯುಟೇಶನ್ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ.

ನಿಪಿ.48 ಮತ್ತು 49 ರ ಪ್ರಕಾರ ಸರ್ವೆ ನಂಬರ್ 149 ಮತ್ತು 148 ರ ಆಸ್ತಿಗಳನ್ನು ನನ್ನ ತಂದೆ ಸ್ವಂತ ಖರೀದಿಸಿದ್ದರು ಎಂದರೆ ಸರಿ. ನಿಪಿ.50 ರಲ್ಲಿ ನಮೂದಿರುವ ಆಸ್ತಿಗಳು ದಾವಾ ಎ ಅನುಸೂಚಿ ಆಸ್ತಿಗಳಲ್ಲಿ ಬರುತ್ತವೆ ಸರಿ. ದಾವಾ ಎ ಅನುಸೂಚಿ ಆಸ್ತಿಗಳ ಕ್ರಮ ಸಂಖ್ಯೆ 1 ರಿಂದ 11ರ ಕಂದಾಯ ದಾಖಲೆಗಳು ಮೊದಲು ನನ್ನ ತಂದೆ ಹೆಸರಿನಲ್ಲಿ ಇದ್ದು, ಅವರ ಮರಣದ ನಂತರ ನನ್ನ ತಾಯಿಯ ಹೆಸರಿನಲ್ಲಿ ಆ ದಾಖಲೆಗಳು

ಬಂದಿದ್ದವು ಎಂದರೆ ಸರಿ. ನನ್ನ ತಾಯಿ ಈ ದಾವಾವನ್ನು ದಾಖಲಿಸಿದ ನಂತರ ಮರಣ ಹೊಂದಿರುತ್ತಾರೆ. ಆ ದಾಖಲೆಗಳು ಈಗಲೂ ಕೂಡ ನನ್ನ ತಾಯಿಯ ಹೆಸರಿನಲ್ಲಿ ಇದೆ.

ಸದರಿ ದಾವಾ ಎ ಅನುಸೂಚಿ ಆಸ್ತಿಗಳ ಕ್ರಮ ಸಂಖ್ಯೆ 1 ರಿಂದ 11 ಅನ್ನು ಹೊರತು ಪಡಿಸಿ ನನ್ನ ತಾಯಿಯ ಹೆಸರಿನಲ್ಲಿ ಭದ್ರಾವತಿ ತಾಲ್ಲೂಕಿನ ನಾಗತಿ ಬೆಳಗಲು ಗ್ರಾಮದಲ್ಲಿ ಸರ್ವೆ ನಂಬರ್ 137 ಮತ್ತು 138 ರಲ್ಲಿ ತಲಾ 36 ಗುಂಟೆ ಜಮೀನು ಇದೆ ಎಂದರೆ ಸರಿ. ನನ್ನ ತಾಯಿ ಆ ಎರಡು ಆಸ್ತಿಗಳನ್ನು ನನಗೆ ಮತ್ತು ನನ್ನ ತಮ್ಮನಿಗೆ ಮರಣ ಶಾಸನ ಮಾಡಿರುತ್ತಾರೆ. ಆ ದಾಖಲೆಯ ಪ್ರಕಾರ ನನಗೆ ಮತ್ತು ನನ್ನ ತಮ್ಮನಿಗೆ ಆ ಆಸ್ತಿಗಳ ಖಾತೆ ಸುಮಾರು 1 ½ ವರ್ಷದ ಹಿಂದೆ ಆಗಿರುತ್ತದೆ. ಆ ವಿಷಯವನ್ನು ಈ ದಾವಾದಲ್ಲಿ ಹೇಳಿಲ್ಲ. ಆ ಎರಡೂ ಆಸ್ತಿಗಳು ನನ್ನ ತಾಯಿಯ ಸ್ವಂತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ನನ್ನ ತಾಯಿ ಆ ಎರಡು ಆಸ್ತಿಗಳ ಕುರಿತು ಮರಣ ಶಾಸನ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಮರಣ ಶಾಸನ ಮಾಡುವ ಹಕ್ಕು ನನ್ನ ತಾಯಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆ ಎರಡೂ ಆಸ್ತಿಗಳನ್ನು ನನ್ನ ತಾಯಿ ನರಸಿಂಹಯ್ಯ ಎನ್ನುವರಿಂದ ಖರೀದಿ ಮಾಡಿದ್ದರು, ಯಾವ ವರ್ಷದಲ್ಲಿ ಮತ್ತು ಎಷ್ಟು ಮೊತ್ತಕ್ಕೆ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ಎರಡೂ ಆಸ್ತಿಗಳನ್ನು ಒಂದೇ ಕ್ರಯ ಪತ್ರದಲ್ಲಿ ಖರೀದಿಸಲಾಗಿತ್ತು. ಆ ಎರಡೂ ಆಸ್ತಿಗಳ ಕುರಿತು 2 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದರೂ ಕೂಡ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆ ಎರಡೂ ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಬೇಕಾಗಿದ್ದು, ಅವುಗಳಲ್ಲಿ ಎಲ್ಲರಿಗೆ ವಿಭಾಗದ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ

ತಾಯಿಗೆ ಯಾವುದೇ ಕೆಲಸವಿರದ ಕಾರಣ ಅವರಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ, ಅವರು ಕೂಲಿ ಕೆಲಸ ಮತ್ತು ಹಸುಗಳ ಸಾಕಾಣಿಕೆ ಮಾಡುತ್ತಿದ್ದು, ಅದರಿಂದ ಅವರಿಗೆ ಆದಾಯವಿತ್ತು. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಬಿ ಅನುಸೂಚಿ ಆಸ್ತಿಗಳ ಕುರಿತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಅನುಕೂಲವಾಗುವ ದಾಖಲೆಗಳನ್ನು ಮಾತ್ರ ಹಾಜರು ಪಡಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹನುಮಂತ ಜಿ.ಹೆಚ್)**
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**